# ಶೋಧದ ನೆಲೆ

ಸಂಪಾದಕರು
ಡಾ. ತಿಪ್ಪೇಸ್ವಾಮಿ. ಡಿ. ಎಸ್
ಡಾ. ಶಿವಲಿಂಗಪ್ಪ. ಆಯ್. ಭಂಡಾರಿ



Scanned with OKEN Scanner

ಶೋಧದ ನೆಲೆ : ಸಂಶೋಧನಾ ಲೇಖನಗಳು

ಲೇಖಕರು : **ಡಾ. ತಿಪ್ಪೇಸ್ವಾಮಿ ಡಿ. ಎಸ್.**
ಹುನಗುಂದ, ಬಾಗಲಕೋಟೆ
**ಡಾ. ಶಿವಲಿಂಗಪ್ಪ ಆಯ್. ಭಂಡಾರಿ**
ಸಿಂಧಗಿ, ವಿಜಯಪುರ

ಪ್ರಕಾಶಕರು : **ಎಸ್.ಎಲ್.ಎನ್. ಪಬ್ಲಿಕೇಷನ್**
ನಂ. 3437, 4ನೇ ಮುಖ್ಯರಸ್ತೆ, 9ನೇ
ಅಡ್ಡರಸ್ತೆ, ಶಾಸ್ತ್ರೀನಗರ, ಬನಶಂಕರಿ 2ನೇ
ಹಂತ, ಬೆಂಗಳೂರು-29 ಮೊ : 9972129376

ISBN : 978-81-948128-4-5

ಪ್ರಥಮ ಮುದ್ರಣ : 2020

ಅಳತೆ : 1/8 ಡೆಮ್ಮಿ

ಕಾಗದದ ಬಳಕೆ : 70 ಜಿ.ಎಸ್.ಎಂ. ಮ್ಯಾಪ್ಲಿಥೋ

ಪುಟಗಳು : xxiv+320=344

ಹಕ್ಕುಗಳು : ಲೇಖಕರದ್ದು

ಪ್ರತಿಗಳು : 1000

ಬೆಲೆ : **ರೂ. 320-00**

ಮುಖಪುಟ ವಿನ್ಯಾಸ : ಕೆ.ಕೆ.ಮಕಾಳಿ, ಹಂಪೆ

ಅಕ್ಷರ ಜೋಡಣೆ : ಸಹನಾ ಗ್ರಾಫಿಕ್ಸ್, ಬೆಂಗಳೂರು. 9342196255

ಮುದ್ರಣ : ಓಂ ಶ್ರೀ ಪ್ರಿಂಟರ್ಸ್, ಕಸ್ತೂರಿ ಬಾ ನಗರ
ಬೆಂಗಳೂರು

Scanned with OKEN Scanner

Title- Life Events of Farmers in Kannada Novel
- Dr. Thippeswamy D.S.

# ಕನ್ನಡ ಕಾದಂಬರಿಗಳಲ್ಲಿ ರೈತರ ಜೀವನದ ಪ್ರಸಂಗಗಳು

ಡಾ. ತಿಪ್ಪೇಸ್ವಾಮಿ ಡಿ.ಎಸ್.

ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ವಿಶ್ವ ಸಾಹಿತ್ಯದಲ್ಲಿ ಗಟ್ಟಿ ಧ್ವನಿಯಾಗಿ ನಿಂತಿರುವ ಸಾಹಿತ್ಯ ಪ್ರಕಾರ ಕಾದಂಬರಿ. ಜನ ಸಾಮಾನ್ಯನ ಪ್ರಮುಖ ಸಾಹಿತ್ಯ ಮಾಧ್ಯಮವೆಂದು ಹೇಳುವಷ್ಟು ಶಕ್ತಿ ಇದಕ್ಕಿದೆ. ಕಾದಂಬರಿ ಕುರಿತಂತೆ "ಹೆನ್ರಿ ಜೇಮ್ಸ್"[1] ಕಾದಂಬರಿಯು ಜೀವನದ ಹೆದ್ದಾರಿಯಂತೆ ಇದ್ದು ಅಲ್ಲಿ ನಡೆಯುವ ಘಟನಾವಳಿಗಳು ಕನ್ನಡಿಯಲ್ಲಿ ಪ್ರತಿಫಲಿಸಿದಂತೆ ಕಾದಂಬರಿಯಲ್ಲಿ ಪಡಿಮೂಡಿವೆ ಎಂದು ಹೇಳಿರುವುದನ್ನು ಗಮನಿಸಬಹುದಾಗಿದೆ.

ಕನ್ನಡದ ಬಹುತೇಕ ಶ್ರೇಷ್ಠ ಕಾದಂಬರಿಗಳೆಲ್ಲಾ ಗ್ರಾಮೀಣ ಪರಿಸರದ ಹಿನ್ನೆಲೆಯಲ್ಲಿಯೆ ರೂಪುಗೊಂಡವುಗಳಾಗಿವೆ. ಜೊತೆಗೆ ಬುಡಕಟ್ಟುಗಳ ವಿಶಿಷ್ಟ ಸಂಸ್ಕೃತಿಯನ್ನು ಒಳಗೊಂಡ ನಿರೂಪಣೆಗಳನ್ನು ಕೆಲವಡೆ ಕಾಣಬಹುದಾಗಿದೆ. ಕೃಷಿ ಸಂಸ್ಕೃತಿಯು ಬದಲಾಗುತ್ತಾ ಹೋದಂತೆ ಆಧುನಿಕ ಕನ್ನಡ ಕಾದಂಬರಿಗಳಲ್ಲಿ ಕೃಷಿ ಸಂಸ್ಕೃತಿಯ ಬಗೆಗಿನ ವ್ಯಾಖ್ಯಾನವು ಕೂಡ ಬದಲಾಗುತ್ತದೆ. ಕುಟುಂಬ, ಜಾತಿ, ಧರ್ಮ, ನಂಬಿಕೆ, ಸಂಪ್ರದಾಯ ಮೊದಲಾದ ಅಂಶಗಳನ್ನೊಳಗೊಂಡಂತೆ ಕನ್ನಡ ಕಾದಂಬರಿಗಳನ್ನು ಬೇರೆ ಬೇರೆ ನೆಲೆಗಳಿಂದ ಅಧ್ಯಯನ ಮಾಡಿರುವುದನ್ನು ಕಾಣುತ್ತೇವೆ. ಹೊಸಗನ್ನಡದ ಕಾದಂಬರಿಗಳ ಮೊದಲ ಹಂತದಲ್ಲಿ ಕುಟುಂಬ, ಜಾತಿ, ಧರ್ಮ, ವಾಸ್ತವತೆಗೆ ಕಾದಂಬರಿಕಾರರು ಕೊಟ್ಟ ವ್ಯಾಖ್ಯಾನಗಳು ಒಂದು

ಗೆಯದಾದರೆ ನವ್ಯ ಕಾದಂಬರಿಕಾರರ ಸಂದರ್ಭದಲ್ಲಿ ಇವಕ್ಕೆ ಬೇರೆ ರೀತಿಯ ಶ್ಲೇಷಣೆಯನ್ನು ನೋಡಬಹುದು.. ಹಳೆ ಜಮೀನ್ದಾರ ಪದ್ಧತಿಯ ಹಿನ್ನಲೆಯಿಂದ ಂದು ರೀತಿಯ ಆದರ್ಶ ರೂಪಿತವಾದರೆ, ಆಧುನಿಕ ಪ್ರಕ್ರಿಯೆಗಳಿಂದ ವ್ಯಕ್ತಿ ೇಂದ್ರಿತ ನಿಲುವುಗಳು ಮುಖ್ಯವಾಗಿ ಕಂಡು ಬರುತ್ತವೆ.

ಕಾದಂಬರಿಕಾರರು ಬರೆದ ಸಂಸ್ಕೃತಿಯ ಆಚಾರ ವಿಚಾರಗಳು ಹಿನ್ನಲೆಯ ಲ್ಲಟಗಳನ್ನು ಈ ಕೆಳಗಿನ ಕೆಲವು ಕಾದಂಬರಿಗಳಲ್ಲಿ ಹೀಗೆ ಕಾಣುತ್ತೇವೆ.

**ಕೋಮನದುಡಿ :**

ಶಿವರಾಮ ಕಾರಂತರ ಚೋಮನದುಡಿ ಕಾದಂಬರಿಯನ್ನು ಸಾಮಾಜಿಕ ಆಯಾಮಗಳ ಮೂಲಕ ವಿಶ್ಲೇಷಿಸಿದಂತೆ ಕೃಷಿ ಸಂಸ್ಕೃತಿಯ ಆಯಾಮಗಳ ಮೂಲಕವೂ ನೋಡಬಹುದಾಗಿದೆ. ಚೋಮನದುಡಿ ಕಾದಂಬರಿಯ ಚೋಮನ ಪಾತ್ರವು ಸಾಮಾಜಿಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ, ಜಾತಿವ್ಯವಸ್ಥೆಯ ಪ್ರತಿನಿಧಿಯಾಗಿ ತಳಸಮುದಾಯಗಳನ್ನು ಪ್ರತಿನಿಧಿಸುವ ಜೀವಂತ ಪಾತ್ರವೆಂದು ಹೇಳಬಹುದು. ಚೋಮನ ಭೂಮಿಯ ಕನಸು ಕೈಗೂಡಲಾರದ ಆಶಯವಾಗಿ ಇಡಿ ಕಾದಂಬರಿಯ ಕೇಂದ್ರವನ್ನು ವ್ಯಾಪಿಸಿಕೊಂಡಿದೆ. ಹತಾಶೆ, ನಿರಾಶೆಗಳಿಂದ ದಲಿತ ಕುಟುಂಬವೊಂದು ಭೂಮಿಯ ಒಡೆತನದ ಕನಸು ಕಾಣುವುದು ಸಾಂಕೇತಿಕವಾಗಿದೆ. ಇಲ್ಲಿನ ಒಡೆತನವೆಂದರೆ ಪಾಳೆಯಗಾರಿಕೆಯ ರೀತಿಯ ಮನಸ್ಥಿತಿಯ ಒಡೆತನವಾಗಿರದೆ ಮಣ್ಣಿನ ಜೊತೆಗಿನ ಜೀವಂತ ಸಂಬಂಧದ ತುಡಿತದಿಂದ ಮೂಡಿಬಂದುದಾಗಿದೆ. ಭೂಮಿ ಮತ್ತು ಮನುಷ್ಯನ ಸಂಬಂಧ ಇಲ್ಲಿ ಪ್ರತಿಮಾತ್ಮಕವಾಗಿ ಚಿತ್ರಿಸಲ್ಪಟ್ಟಿದೆ. ಚೋಮನಂತಹ ಸಮುದಾಯಕ್ಕೆ ಕೃಷಿ ಜೀವನೋಪಾಯ ಮಾತ್ರವಾಗಿರದೆ, ಮುಕ್ತಿಯ ಸಾಧನವೂ ಆಗಿದೆಯೆನ್ನುವುದನ್ನು ಕಾದಂಬರಿ ಪರಿಣಾಮಕಾರಿಯಾಗಿ ನಿರೂಪಿಸುತ್ತದೆ. ಇದು ಇಡಿಯಾಗಿ ತಳಸಮುದಾಯಗಳ ಆಶಯವೊಂದನ್ನು ಊಳಿಗಮಾನ್ಯವ್ಯವಸ್ಥೆಯ ಕ್ರೌರ್ಯದ ಬಂಧನದಲ್ಲಿ ಈಡೇರಲಾಗದ ವಾಸ್ತವವನ್ನು ವಿಷಾದಭರಿತ ಧ್ವನಿಯಲ್ಲಿ ಚಿತ್ರಿಸುತ್ತದೆ. ಕಿತ್ತು ತಿನ್ನುವ ಹಸಿವಿನ ಜೊತೆಗೆ ವಾಸ್ತವ ಜಗತ್ತಿನ ಕಾಠಿಣ್ಯವನ್ನು ಮೀರುವ ಪ್ರಯತ್ನವಾಗಿ ಕುಡಿತಕ್ಕೆ ದಾಸರಾಗುವುದನ್ನು ಕಾಣಬಹುದು. ಇಂತಹ ಒಂದು ಸಂದರ್ಭದಲ್ಲಿಯೇ ಅವನ ಸಿಟ್ಟು, ಆವೇಶ, ಆಕ್ರೋಶ, ದುಡಿಮೆ ಮೇಲೆ ಪ್ರಭಾವ

ಬಿರುವುದು. ಚೋಮನ ಜೀವಂತಿಕೆಯ ಕನಸು ಬೇಸಾಯ ಮಾಡಬೇಕು. ಜಮೀನದಾರಿಕೆಯಲ್ಲಿ ತನ್ನ ಬದುಕು ಕಟ್ಟಿಕೊಳ್ಳಬೇಕು ಎಂಬ ಮಹತ್ತರದ ಕನಸು ಕಾದಂಬರಿಯ ಕೊನೆಗೂ ಕೈಗೂಡದೆ ಇರುವುದು ವಾಸ್ತವದ ನಿಜಧ್ವನಿಯನ್ನು ಸೂಚಿಸುತ್ತದೆ.

ಬಡತನದಲ್ಲಿ ಬಂದ ಚೋಮನು ಮಕ್ಕಳು ಸದಾಕಾಲ ಅನಾರೋಗ್ಯದಿಂದ ಬಳಲುತ್ತಾರೆ. ಬೆಳ್ಳಿ ಮನೆ ಕೆಲಸ ಮುಗಿದ ನಂತರ ಸಂಕಪ್ಪಯ್ಯನ ಮನೆಗೆ ಹುಲ್ಲು ತಂದು ಹಾಕಬೇಕು. ಸಂಕಪ್ಪ ಸಾಹುಕಾರ ನೀಡಿದ ಅಕ್ಕಿಯನ್ನು ತಂದು ಬೆಳ್ಳಿ ತನ್ನ ತಮ್ಮಂದಿರಿಗೆ ಗಂಜಿ ಕಾಯಿಸಿ ನೀಡಬೇಕು. ಚೋಮನ ಹಾಳು ಕುಡಿತದ ಚಟದಿಂದ ಉಪವಾಸವಿರಬೇಕಾದ ಸಂದರ್ಭಗಳಿದ್ದವು. ಅಗತ್ಯ ಜೀವನೋಪಾಯದ ಮಾರ್ಗವೇ ಇಲ್ಲದೆ ಅಲ್ಲಿ ಚೋಮನ ಮಕ್ಕಳು ಸಾಮಾಜಿಕವಾಗಿ ಶ್ರೀಮಂತರಿಂದ ಬೇಡಿ ತಿಂದು ಜೀವನ ಸಾಗಿಸಬೇಕಾಗಿತ್ತು. ಕೆಳ ಜಾತಿಯ ಚೋಮ ನೇಗಿಲ ಹಿಡಿದರೆ ಪ್ರಳಯವಾದಿತು. ಎಂಬ ನಂಬಿಕೆಯು ಈ ಸಮಾಜದ ಮೇಲ್ವರ್ಗದ ಜನರದು. ಕೈ ಹಿಡಿದ ಮಡದಿ (ಹೊಲತಿ) ಇರುವಾಗಲೇ ನೇಗಿಲ ಹಿಡಿಯಬೇಕೆಂಬ ನಂಬಿಕೆ ಚೋಮನಲ್ಲಿ ಮನೆಮಾಡಿತ್ತು.

ಬಡನತ ಮರೆತ ಗುರುವಾ ಕಾಳರ ಜೀವನ ಕುಡಿತ ಮತ್ತು ಹಪಹಪಿಕೆಯಲ್ಲಿಯೇ ಕಳೆದು ಹೋಗುತ್ತದೆ. ಇಲ್ಲಿ ಇನ್ನೊಂದು ತುಂಬಾ ವಿಸ್ಮಯ ಕಾರ್ಯ ಎಂದರೆ ಬೆಳ್ಳಿಯ ಮದುವೆ ವಿಚಾರ ಮಾಡದೆ ಗುರುವಾರ ಬೇರೆ ಜಾತಿಯ ಹುಡುಗಿಯ ಮದುವೆಯಾಗಿ ದನಿಯ ಸಾಲ ತೀರದೆ ಒಂದು ದಿನ ತನ್ನ ಅಕ್ಕ ಸ್ವತಃ ಅವಳೆ ದುಡಿಯಲು ಬೇರೆ ಊರಿಗೆ ಹೋಗುತ್ತಾಳೆ.

ಸಾಲ ತೀರಿಸುವುದಕ್ಕೆ ಬೆಳ್ಳಿ ಹೋಗುವ ಸಂದರ್ಭ ಸ್ತ್ರೀ ಎನ್ನುವ ಭಾವನೆಯಿಂದ ಅವಳಿಗೆ ಸಾರಿಗೆ ಸಂಪರ್ಕ ಒದಗಿಸಿಕೊಡುವ ಸಂದರ್ಭ ಬರುವಂತಹದ್ದು. ಮುಂದೆ ಬೆಳ್ಳಿಯು ತೋಟದ ಕೆಲಸ, ಮನೆಕೆಲಸ, ಪುರುಷರ ಸಮಾನವಾಗಿ ಬೆಳ್ಳಿಯು ಮಾಡುತ್ತಾಳೆ.

ಚೋಮನ ಬೇಸಾಯದ ಕನಸು ಚೋಮನ ಸಾವಿನ ಅಂತ್ಯದೊಂದಿಗೆ ಮುಕ್ತವಾಗಿರುವುದು ತುಂಬಾ ದುಖಃದ ಸಂಗತಿಯೆಂದರೆ ತಪ್ಪಾಗಲಾರದು. ಸಂಕಪ್ಪನಿಂದ ಸ್ವಲ್ಪ ಭೂಮಿಯನ್ನು ಕೊಡಿಸಿದರೆ ಈ ಕಾದಂಬರಿಯು ದಲಿತ

ವ್ಯಕ್ತಿಯ ಚಿತ್ರಕ್ಕೆ ಸ್ವರೂಪ ಪಡೆದುಕೊಳ್ಳುತ್ತಿತ್ತು. ಬೆಳ್ಳಿಯ ಬದುಕಿನಲ್ಲಿ ಮದುವೆಯ ಪ್ರಸಂಗ ಬಾರದೆ ಇರುವುದು ಬಡತನ, ಜಾತಿ, ವರ್ಗ, ವರ್ಣ, ಲಿಂಗ, ಬೇಧ, ಆರ್ಥಿಕ ಸಮಾನತೆ, ಮರೆತು ಸಮಾಜ ಬಡತನ, ಹಸಿವು ಇಂದ ·ಬೆಳ್ಳಿಯು ಕೊನೆಯ ಹಂತದಲ್ಲಿ ಮದುವೆಯ ಭಾಗ್ಯ ಕೂಡಿಬಾರದೆ ಇರುವ ಹೆಣ್ಣಿನ ಸಂಸಾರದ ಕಥೆಯು ವ್ಯಥೆಯಾಗಿ ತಿಳಿದುಬರುತ್ತದೆ.

**ಕಾನೂರು ಸುಬ್ಬಮ್ಮ ಹೆಗ್ಗಡತಿ**

ಹೂವಯ್ಯನ ವೈಚಾರಿಕ ಪ್ರಜ್ಞಾವಂತ ವಿಶೇಷ ಗುಣ ಉಸಿರಾಡುವಷ್ಟು ಅದು ಆತನಿಗೆ ಸಹಜವಾಗಿರುತ್ತದೆ. ವಿಚಾರ ಭೌತಿಕ ಮಟ್ಟದಲ್ಲಿ ನಿಂತರೆ ಚೆನ್ನಾಗಿ ಆಲೋಚನೆ ಮಾಡಿ ಸರಿಯಾದ್ದನ್ನು ನಂಬಿ ಆಚರಿಸಿದಾಗ ಜೀವನ ಹಸನಾಗುತ್ತದೆ. ಆಮೇಲೆ ಆಚಾರ ಎಂದರು ಹೆಚ್ಚುಕಡಿಮೆ ಒಟ್ಟಿಗೆ ನಡೆಯುವ ಸೃಜನ ಕ್ರಿಯೆ. ಹಳ್ಳಿಗರ ಮೌಢ್ಯವನ್ನು ನಿವಾರಿಸಲು ಮಾಡುತ್ತಿದ್ದ ಪ್ರಯತ್ನವು ಜೋಯಿಸರ ಭಾಗಕ್ಕೆ ಅಸಹನೀಯವಾಗಿತ್ತು. ಅಲ್ಲದೇ ಬ್ರಾಹ್ಮಣರಾದ ತಮಗಿಂತಲೂ ಶೂದ್ರನಾದ ಅವನಿಗೆ ಉಪನಿಷತ್ತು, ಭಗವದ್ಗಿತೆ ಮೊದಲಾದ ಪರಿಚಯವು ಜ್ಞಾನವು ಹೆಚ್ಚಾಗಿದೆ ಎಂಬುದು ಉಪನಿಷತ್ತು ಭಗವದ್ಗಿತೆ ಜೋಯಿಸರಿಗೆ ಚೆನ್ನಾಗಿ ತಿಳಿದಿತ್ತು.

ಹೂವಯ್ಯನು ಬೆನ್ನು ನೋವಿನಿಂದ ನರಳುತ್ತಿದ್ದಾಗ ಜೋಯಿಸರು ಮಂತ್ರ ಹಾಕಿಸಿ ಪೂಜೆ ಮಾಡಿಸಿದರೆ ಗುಣವಾಗುತ್ತದೆ ಎಂದು ಶ್ಯಾಮೇಗೌಡರಿಗೆ ತಿಳಿಸುತ್ತಾರೆ. ಹೂವಯ್ಯ ಜೋಯಿಸರನ್ನು ತರಾಟೆಗೆ ತೆಗೆದುಕೊಳ್ಳುತ್ತಾನೆ. ನೀವು ತಿಳಿದವರೆಂದುಕೊಂಡು ಹಳ್ಳಿಯವರೆಗೆ ಮೌಢ್ಯವನ್ನು ಉಪದೇಶ ಮಾಡಿ ವಿಭೂತಿ ಕೊಡುವುದು ಸತ್ಯನಾರಾಯಣ ವ್ರತ ಮಾಡಿಸುವುದು, ದೆವ್ವ ಪಿಶಾಚಿಗಳನ್ನು ಬಲಿ ಕೊಡಿಸುವುದು ಇದರಿಂದ ಹೊಟ್ಟೆ ಉರಿದುಕೊಳ್ಳುತ್ತಿದ್ದರು. ನೀವು ಜನಗಳಿಗೆ ಮೌಢ್ಯವನ್ನು ಬಿತ್ತಿ ಮೋಸಮಾಡಬೇಡಿರಿ ಎಂದು ಹೂವಯ್ಯನು ಜೋಯಿಸರಿಗೆ ಹೇಳುತ್ತಾನೆ. ಹೀಗೆ ಕೃಷಿ ಸಂಸ್ಕೃತಿಯ ಶೋಷಣೆಯ ಮುಖಗಳನ್ನು ಕಾದಂಬರಿಯು ಚಿತ್ರಿಸುತ್ತದೆ.

ಕಾನೂರು ಚಂದ್ರೇಗೌಡರು, ಮುತ್ತಳ್ಳಿ ಶಾಮೇಗೌಡರು, ಸೀತಿಮನಿ ಶಿಂಗಪ್ಪಗೌಡ್ರು, ಕಳಕಾನೂರು ಅಣ್ಣಯ್ಯಗೌಡ್ರು ಮುಂತಾದ ಮೇಲ್ವರ್ಗಕ್ಕೆ ಸೇರಿದ

ಜನರಿಂದ ಹಿಡಿದು ಅತ್ಯಂತ ಕೆಳವರ್ಗದ ಮಂದಿಯವರೆಗೂ ವೆಂಕಪ್ಪ ಜೋಯಿಸರು ಪ್ರಭಾವ ತಾನೇ ತಾನಾಗಿ ಹರಡಿಕೊಂಡಿದೆ.

ಮುಂದೆ ಗಾಯದ ಹುಲಿ ಹೊಡೆಯಲು ಹೋಗಿ ಅದಕ್ಕೆ ಬಲಿಯಾದ ಕೃಷ್ಣಪ್ಪನಿಗೆ ಗೊತ್ತಾದ ಸೀತೆಯನ್ನು ತಮ್ಮ ಹೆಂಡತಿ ಅಕ್ಕನ ಮಗನಾದ ಹೂವಯ್ಯನಿಗೆ ಹೇಗಾದರೂ ಸರಿ ಮದುವೆ ಮಾಡಿಸಬೇಕೆಂದು ನಾನಾ ಹುನ್ನಾರಗಳನ್ನು ಹಾಕಿ ಸಿಂಗಪ್ಪಗೌಡ್ರು ಸರ್ವ ಪ್ರಯತ್ನ ಪಟ್ಟರೂ ಸಫಲರಾಗುವುದಿಲ್ಲ. ಜೋಯಿಸರು ಹೂವಯ್ಯ ಸೀತೆ ಜಾತಕ ಎಷ್ಟು ಕೂಡದಿಲ್ಲ ಎಂದು ತನ್ನ ಕಂಠಕಗಳಿಂದ ಹೇಳಿದರು. ಮುಂದೆ ಜೋಯಿಸರು ಸ್ವಾರ್ಥಪರ ಕುತಂತ್ರದಿಂದ ಹಲವಾರು ಜೀವಗಳು ದುರಂತಕ್ಕೆ ಗುರಿಯಾಗುತ್ತವೆ. ಜೀವನ ಸೀತೆ ಜೋಯಿಸರ ಕೈಯಲ್ಲಿದೆ ಎಂಬುದು ಹೂವಯ್ಯನಿಗೆ ಗೊತ್ತಾಗುವುದಿಲ್ಲ. ಆದ್ದರಿಂದ ಈ ಒಂದು ಜೋಯಿಸರ ಕುತಂತ್ರಕ್ಕೆ ಅಮಾಯಕಳಾದ ಸೀತೆಯು ಬಲಿಯಾಗುತ್ತಾಳೆ.

ವೆಂಕಪ್ಪ ಜೋಯಿಸರು ಪ್ರತಿ ಮಾತಿನಲ್ಲಿ ಪುರೋಹಿತ ಶಾಯಿಯ ಮೋಸ, ಕಪಟ, ಸ್ವಾರ್ಥ, ಒಣ ಪ್ರತಿಷ್ಠೆ, ಶೂದ್ರರ ಮೌಢ್ಯವನ್ನು ಬಂಡವಾಳವಾಗಿಸಿಕೊಂಡು ಹೊಟ್ಟೆ ಉರಿದುಕೊಳ್ಳುವುದು ಶೂದ್ರರನ್ನು ಅಜ್ಞಾನ ಕತ್ತಲೆಯಲ್ಲಿಡುವ ವ್ಯಾಪಕವಾಗಿ ಚಿತ್ರಿಸಿರುವ ಕಾದಂಬರಿ.

ವೆಂಕಪ್ಪ ಜೋಯಿಸರು ಬಿಟ್ಟರೆ ಚಂದ್ರಯ್ಯಗೌಡ, ಶಾಮಯ್ಯಗೌಡ, ಸಿಂಗಪ್ಪಗೌಡ್ರ, ಮುಂತಾದವರು ಮೇಲ್ವರ್ಗಕ್ಕೆ ಸೇರಿದವರು. ಈ ಮೂವರು ಗೌಡರಗಳಲ್ಲಿ ಚಂದ್ರೇಗೌಡರೆ ಮೇಲುಗೈ.

ಹೊಲ ಊಳುತ್ತಿದ್ದ ಬೈರ ಮತ್ತು ಸಿದ್ದರಲ್ಲಿಗೆ ಹೋಗಿ ಹೂವಯ್ಯ ಮತ್ತು ರಾಮಯ್ಯ ನೇಗಿಲನ್ನು ಹಿಡಿದುಕೊಳ್ಳುತ್ತಾರೆ. ಹೊಸಬರನ್ನು ಕಂಡ ಎತ್ತುಗಳು ಬೆದರಿ ಎತ್ತಲೋ ಸಿಕ್ಕಾಪಟ್ಟೆ ನುಗ್ಗುತ್ತವೆ. ಪರಿಣಾಮವಾಗಿ ರಾಮಯ್ಯ ಊಳುತ್ತಿದ್ದ ನೇಗಿಲ ಮುರಿದು ಹೋಗುತ್ತದೆ. ಜೀತದಾಳು ಬೈರ ಮತ್ತು ಸಿದ್ದರು ಚಂದ್ರೇಗೌಡರು ಕೋಪಕ್ಕೆ ನಡಗುತ್ತಾರೆ. ಬೈರನಿಗೆ ಕಪಾಳಮೋಕ್ಷ ಗೌಡರಿಂದಾಗುತ್ತದೆ. ಅವರಿಗೆ ಕೊಡಬೇಕಾದ ಪಡಿಯನ್ನು ಕೂಡಾ ಗೌಡರು ಕೊಡುವುದಿಲ್ಲ. ಮುಂದೆ ಹೂವಯ್ಯನೆ ಅವರ ಗುಡಿಸಲಿಗೆ ಹೋಗಿ ಪಡಿಯನ್ನು ಕೊಟ್ಟುಬರುತ್ತಾನೆ.

ಈ ಕಾದಂಬರಿಯಲ್ಲಿ ಗ್ರಾಮೀಣ ಜೀವನದ ಸ್ಥಳೀಯ ವಿವರಗಳನ್ನು ಅನಾದೃಷ್ಯವಾಗಿ ಕಾನೂರು ಹೆಗ್ಗಡತಿ ನೀಡುತ್ತದೆ. ಹಳ್ಳಿಯ ಬದುಕಿನ ಎಲ್ಲ ಸ್ಥೂಲ ಮತ್ತು ಸೂಕ್ಷ್ಮ ಸಂಗತಿಗಳನ್ನು ಗಾಢ ಸಾಮಾಜಿಕ ಪ್ರಜ್ಞೆಯಿಂದಲೂ ಐತಿಹಾಸಿಕ ತಿಳಿವಿನಿಂದಲೂ ಕಾದಂಬರಿ ಸಾಕ್ಷಿಯ ದಾಖಲು ಮಾಡುತ್ತದೆ.

**ಚಂದವಳ್ಳಿ ತೋಟ**

ತ.ರಾ.ಸು. ಅವರ ಈ ಕಾದಂಬರಿಯಲ್ಲಿ ಬರುವ ಕೃಷಿ ಸಂಸ್ಕೃತಿಯ ಈ ರೀತಿ ಇವೆ. ಶಾಮಣ್ಣ ಪ್ರತಿ ನವರಾತ್ರಿಯಲ್ಲಿ ಚಂದವಳ್ಳಿಗೆ ಹೋಗುವಾಗ ರಾಮಿಯನ್ನು ಕರೆಯುತ್ತಿದ್ದ. ಚಂದವಳ್ಳಿ ಸೊಗಸಾದ ಕೆರೆಯ ಪ್ರಕೃತಿ, ಸೌಂದರ್ಯ ಪುರಾತನ ದೇವಾಲಯ ಶಿಲ್ಪವೈಭವದಡಿ ಬಯಲು ನಾಟಕ, ಕೋಲಾಟದ ಕುಣಿತ ಹೀಗೆ ಯಾವುದಾದರೊಂದನ್ನು ನೋಡಲು ಕರೆಯುತ್ತಿದ್ದ. ನಾಲ್ಕು ವರ್ಷ ಆದ ಮೇಲೆ ರಾಮಿ ಶಾಮಣ್ಣನ ಜೊತೆ ಚಂದವಳ್ಳಿಗೆ ಹೊರಟರು.

ತೋಟದ ಕಡೆಗೆ ಇಳಿಜಾರು ಬಾಗಿದ ಎಪ್ಪತ್ತೆಂಬತ್ತು ವರ್ಷಗಳ ಮುದುಕನೊಬ್ಬ ಕುಳಿತಿದ್ದು ಕಾಣಿಸಿತು ವಾರಿಯು ಇಳಿಜಾರನ್ನು ಹತ್ತಲಾಗದೆ ಎರಡು ಕೈಗಳಲ್ಲಿ ನೆಲವನ್ನು ಹಿಡಿದುಕೊಂಡು ಹತ್ತಲು ಯತ್ನಿಸಿ ಕಾಲುಜಾರಿ ಕೆಳಗುರುಳುತ್ತಿದ್ದದ್ದು ಶಾಮಣ್ಣ ಹುಷಾರಾಗಿ ಮೇಲಕ್ಕೆ ಹತ್ತಿಸಿ, ನಡೆಸಿಕೊಂಡು ಹಳ್ಳಿಯ ಕಡೆಗೆ ಹೊರಟ. ರಾಮಿಯು ಇತ್ತ ಯಾರು ಎಂದು ಕೇಳಲು ಶಾಮಣ್ಣ ಯಾರು ಅಂತ ಹೇಳಲಿ ರಾಮಿ ಈ ಊರಿನ ನಮ್ಮನ್ನೆಲ್ಲಾ ಸಾಕಿದ ಧಣಿ, ಈ ಊರಿನ ದೊಡ್ಡ ಯಜಮಾನ ಅಂತಾ ರಾಮಿ ಹೇಳಿದನು. ಹಾಗಿದ್ದರೆ ಧಣಿಗಳು ಹೀಗೆ ಆಗಲು ಕಾರಣ ಏನು? ಶಾಮಣ್ಣ ಎಂದು ರಾಮಿ ಕೇಳಿದನು. ಶಿವನಂಜೇಗೌಡರ ಮನ ಬಂದು ಕಾಲದಲ್ಲಿ ನಂದಗೋಕುಲ ತರಹ ಅವರ ಮನೆ ಇತ್ತು. ಅವತ್ತು ಆ ಊರಿನ ಆಕಸ್ಮಾತ್ ಒಬ್ಬ ಅಮಲ್ದಾರ್ ಬಂದು ತುಂಬಾ ಬಿಸಿಲು ಇತ್ತು ಅವರಿಗೆ ಬಿಸಿಲಲ್ಲಿ ಬಂದಿದ್ದರಿಂದ ಎಳೆನೀರು ಸುತ್ತಮುತ್ತ ಹುಡಿಕಿದರೂ ಸಿಗಲಿಲ್ಲ. ಮುಂದೆ ಅಮಲ್‌ದಾರ್ ಹೇಳಿದ ಹಾಗೆ ಆ ಊರಿನಲ್ಲಿ ಒಂದು ತೋಟ ಮಾಡಿಸಲು ಹೇಳಿದ್ದರು. ಮುಂದೆ ಅದೇ ವಿಚಾರವಾಗಿ ನಂಜನಗೌಡರ ಆ ಊರಿನಲ್ಲಿ ಒಂದು ತೋಟ ಮಾಡಲು ಜೋಯಿಸರ ಹತ್ತಿರ ಕೇಳಲು ಹೋದರು. ನಂಜೆಗೌಡರ ಹೆಂಡತಿ ಪುಟ್ಟಿತಾಯಿಯನ್ನು ಕೇಳು ಮತ್ತು

ತೋಟ ಮಾಡಲು ಮುಂದೆ ನಂಜನಗೌಡರ ಗದ್ದೆಯನ್ನು ನರಹರಿಗೆ ದಾನಕೊಟ್ಟು ಅವರಿಗೆ ಗದ್ದೆಯನ್ನು ಪಡೆದನು. ನಂಜನಗೌಡರು ಆ ತೋಟವನ್ನು ಫಲವತ್ತತೆಯ ಮಣ್ಣು ಇದ್ದರಿಂದ ಅದನ್ನು ತೋಟವನ್ನು ನರಹರಿಯಿಂದ ಪಡೆದ ಭೂಮಿಯನ್ನು ತೋಟ ಮಾಡಿದನು. ಮುಂದೆ ಆ ಚಂದವಳ್ಳಿಯಲ್ಲಿ ಮಳೆ ಇಲ್ಲದೆ ತುಂಬಾ ತೊಂದರೆಯಾಯಿತು. ನಂತರ ನಂಜನಗೌಡರು ಊರಿನ ದೇವರಾದ ಆಂಜನೇಯನ ಮೊರೆ ಹೋದುದರಿಂದ ಆ ಊರಿಗೆ ಮಳೆ ಆಯಿತು. ಊರಿಗೆ ನೀರು ತಂದು ನಂಜನಗೌಡರು ಭಗೀರಥರಾದರು.

ನಂಜನಗೌಡರ ಇಬ್ಬರ ಮಕ್ಕಳು ಹನಮಯ್ಯ ಮತ್ತು ರಾಮಯ್ಯ. ಮುಂದೆ ರಾಮಯ್ಯ ಅಡ್ಡದಾರಿಯನ್ನು ಹಿಡಿದನು. ಅದಕ್ಕೆ ಕಾರಣ ಕರಿಯಪ್ಪ ಆ ಊರಿನ ಬಹಿಷ್ಕಾರಕ್ಕೆ ಒಳಗಾಗಿದ್ದ. ಆ ನಂಜನಗೌಡರ ಮನೆತನದ ಸೇಡಿಗಾಗಿ ರಾಮಯ್ಯನನ್ನು ಅಡ್ಡ ದಾರಿ ಹಿಡಿಸಿದ್ದರು. ಮನೆಯ ಆಸ್ತಿ ಭಾಗವಾಗುತ್ತದೆ. ಮುಂದೆ ಚಂದವಳ್ಳಿ ತೋಟ ಆಸ್ತಿಯ ಪಾಲನ್ನು ರಾಮಯ್ಯನು ಕೇಳುತ್ತಾನೆ. ಅಣ್ಣ ತಮ್ಮಂದಿರು ಬೇರೆಯಾಗಿ ಹನಮಯ್ಯನ ಹೊಲಗದ್ದೆ ಫಸಲು ತುಂಬಾ ಚೆನ್ನಾಗಿ ಬರುತ್ತದೆ. ನಂತರ ರಾಮಯ್ಯ ಕಡೆಯಿಂದ ಹನಮಯ್ಯ ಹೊಲಕ್ಕೆ ದನಕರಗಳ ಮೇಯಲು ಬಿಡುತ್ತಾನೆ. ರಾಮಯ್ಯ ಮತ್ತು ಹನಮಯ್ಯ ಜಗಳವಾಗಿ ರಾಮಯ್ಯನ ಕುತಂತ್ರದಿಂದ ಹನಮಯ್ಯನಿಗೆ ಮೂರು ತಿಂಗಳು ಕಠಿಣ ಶಿಕ್ಷೆ ಆಗುತ್ತದೆ. ಒಟ್ಟಾರೆಯಾಗಿ ನಂದಗೋಕುಲವಾಗಿದ್ದ ಆ ಮನೆ ಅದಕ್ಕೆ ಕಾರಣರಾದ ಕರಿಯಪ್ಪ ಸುಬ್ಬಾಬಟ್ಟ, ಅವನ ಹೆಂಡತಿ ಜಲಜಾಕ್ಷಮ್ಮ ಇವರೆಲ್ಲರೂ ಆ ಮನೆಯನ್ನು ಹಾಳುಮಾಡಿದರು. ಚಂದವಳ್ಳಿಯಂತಿದ್ದ ಈ ಊರು ಈ ಮೂರು ಜನರಿಂದ ಆ ಮನೆಯ ವ್ಯವಸ್ಥೆಯೇ ಹಾಳಾಯಿತು. ಈ ದುರಂತದಲ್ಲಿ ಕೃಷಿ ತೋಟ ಬೆಳೆಯದೆ ಕೊನೆಗೊಳ್ಳುತ್ತದೆ.

**ಒಡಲಾಳ**

ದೇವನೂರು ಮಹಾದೇವ ಅವರ ಮಹತ್ವದ ಕಾದಂಬರಿ ಒಡಲಾಳವು ಕೃಷಿಸಂಸ್ಕೃತಿಯಲ್ಲಿನ ಶೋಷಣೆಯ ವಿವಿಧ ಆಯಾಮಗಳನ್ನು ಚಿತ್ರಿಸುವ ಒಂದು ಶ್ರೇಷ್ಠ ಕೃತಿಯಾಗಿದೆ. ಸಾಕವ್ವ ಆ ಹಟ್ಟಿಯ ಯಜಮಾನಿ. ತನ್ನ ದುಡಿಮೆಯಿಂದ ನಾಲ್ಕು ಕಂಬಗಳ ಆ ತುಟ್ಟಿ ಹಟ್ಟಿಯನ್ನು ಕಟ್ಟಿದ್ದೇನೆ ಎಂಬ ಹೆಮ್ಮೆ ಅವಳದು.

ಐದು ಮಕ್ಕಳ ತಾಯಿ ಮೂರು ಗಂಡು, ಎರಡು ಹೆಣ್ಣು. ನಾಲ್ಕು ಎಕರೆ ಜಮೀನಿದ್ದರೂ ಮಳೆಯನ್ನು ನಂಬಿ ಭೂಮಿಯಾದ ಕಾರಣ ಅವಳ ಸಂಸಾರ ಬಹುಮಟ್ಟಿಗೆ ಕೂಲಿನಾಲಿಯಲ್ಲಿ ಸಾಗುತ್ತದೆ. ಆ ಸಣ್ಣ ಮನೆಯ ಒಂದು ಭಾಗದಲ್ಲಿ ಅವಳ ಹಿರಿಯಮಗ ಕಾಳಣ್ಣ ಅವನ ಹೆಂಡತಿ ಪ್ರತ್ಯೇಕ ಒಲೆ ಹೂಡಿದ್ದಾರೆ. ಅವರಿಗೆ ಮಕ್ಕಳಿಲ್ಲ. ಈ ಕುಟುಂಬಕ್ಕಿರುವ ಆಸ್ತಿ ನಾಲ್ಕು ಎಕರೆ ಜಮೀನು. ಆರ್ಥಿಕವಾಗಿ ಯಾವುದೇ ಭದ್ರತೆಯಿಲ್ಲ. ಯಾರಿಗೂ ಉದ್ಯೋಗ ಇರುವುದಿಲ್ಲ. ಜಮೀನು ಇದ್ದರೂ ಮಳೆ ಇಲ್ಲದ ಕಾರಣ ಯಾವುದೆ ಬೆಳೆಗಳನ್ನು ಬೆಳೆಯಲಾಗುತ್ತಿಲ್ಲ. ಹಾಗಾಗಿ ಒಂದೊತ್ತಿನ ಕೂಳಿಗೂ ಒದ್ದಾಡುವಂತಹ ಸ್ಥಿತಿ. ಅಂದಿನ ಆಹಾರವನ್ನು ಅಂದೇ ಸಂಪಾದಿಸುವ ಒತ್ತಡ. ಹೊಟ್ಟೆಗಿಲ್ಲದ ಈ ಕುಟುಂಬ ಸದಸ್ಯರಲ್ಲಿ ಕಳವು ಮಾಡುವಂತಹ ಒತ್ತಡಕ್ಕೆ ಒಳಗಾಗಿದ್ದಾರೆ.

ಸಾಕವ್ವ ಕೋಳಿ ಕಳವು ಇಡೀ ಕಾದಂಬರಿಯ ಕೇಂದ್ರ ಸಮಸ್ಯೆಯು ಸಾಕವ್ವನ ಕೋಳಿ ಕಳುವಿನ ಪ್ರಸಂಗದಿಂದ ಕೂಡಿದೆ. ಕಾದಂಬರಿ ಶುರುವಾಗುವುದೇ ಈ ಘಟನೆಯಿಂದ. ಸಾಕಷ್ಟು ಕೋಳಿಗಳಲ್ಲಿ ಒಂದು ಕೋಳಿಯನ್ನು ದೇವರಿಗೆಂದು ಬಿಟ್ಟಿದ್ದ. ಅದೇ ಕೋಳಿಯನ್ನು ಯಾರೋ ಕದ್ದೊಯ್ಯುತ್ತಾರೆ. ದೇವರಿಗೆ ಕೃಪೆಯಾಗುವುದೆಂಬ ಭಯದ ಹಿನ್ನೆಲೆಯಲ್ಲಿ ಸಾಕವ್ವನ ಇಲ್ಲಿನ ನೋವು. ಹುಂಜ ದೇವರದ್ದು ಎನ್ನುವುದಾಗಲಿ ಬಹಳ ಬೆಲೆ ಬಾಳುವಂತಹದ್ದು ಎನ್ನುವುದಾಗಲಿ ಮುಖ್ಯವಾಗಿದೆ.

ಕಳೆದ ಹುಂಜದ ಬಗ್ಗೆ ಸಾಕವ್ವನನ್ನು ಬಿಟ್ಟರೆ ಕುಟುಂಬದ ಮತ್ಯಾರು ತಲೆಕೆಡಿಸಿಕೊಂಡವರಿಲ್ಲ. ಹುಂಜ ಕಳೆದ ದಿನದಿಂದಲೇ ಸಾಕವ್ವ ತನ್ನ ಮಗನೋ ಮಗಳೋ ಕಳೆದುಕೊಂಡವಳಂತೆ ವರ್ತಿಸುತ್ತಾಳೆ. ಕಾದಂಬರಿಯ ಕ್ರಮ ವಾಸ್ತವಸ್ಥಿತಿಗೆ ಅನುಗುಣವಾಗಿದೆ. ಹುಂಜವನ್ನು ಹುಡುಕಲು ಮಾದರಿಯಾಗಿ ಸಾಕವ್ವನ ಮತ್ತೊಂದು ಕೋಳಿ ಪಡೆದ ಪೋಲಿಸರು ಧೂಳೆಬ್ಬಿಸಿಕೊಂಡು ಜೀಪಲ್ಲಿ ತೆರಳುವ ದೃಶ್ಯ ಅತ್ಯಂತ ಧ್ವನಿಪೂರ್ಣವಾಗಿದೆ. ಒಂದು ಹುಂಜ ಕಳೆದುಕೊಂಡು ಸಾಕವ್ವ ಅದನ್ನು ಪಡೆಯುವದಕ್ಕಾಗಿ ಮತ್ತೊಂದು ಅಂತಹದ್ದೇ ಹುಂಜವನ್ನು ಮತ್ತೊಮ್ಮೆ ಕಳೆದುಕೊಳ್ಳುವ ಯಾತನೆ ಇಡೀ ದಲಿತ ಲೋಕದ ಅಸಹಾಯಕ ಸ್ಥಿತಿಯನ್ನು ಸೂಚಿಸುತ್ತದೆ. ಹೀಗೆ ಒಡಲಾಳ ಕಾದಂಬರಿಯು ಕೃಷಿ ಸಂಸ್ಕೃತಿಯಲ್ಲಿನ

ಶೋಷಣೆಯ ವಿವಿಧ ಮುಖಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ.

## ಬೆಟ್ಟದ ಜೀವ

ಬೆಟ್ಟದ ಜೀವ ಒಂದು ಸಣ್ಣ ಸಂಸಾರದ ಬಗ್ಗೆ ಶಿವರಾಮ ಕಾರಂತರ ಬರೆದ ಅಪರೂಪದ ಕೃತಿ. ಈ ಕಾದಂಬರಿಯಲ್ಲಿ ಒಂದು ಕುಟುಂಬ ಒಂದು ಬೆಟ್ಟದ ಮೇಲೆ ವಾಸವಾಗಿರುತ್ತದೆ. ಕುಟುಂಬದ ಅತಿಥಿ ಸತ್ಕಾರ. ಅವರ ಕಷ್ಟಗಳು, ಜೀವನದ ಕ್ರಮ ಮತ್ತು ಶ್ರಮವನ್ನು ಚಿತ್ರಿಸುತ್ತದೆ. ಸ್ವಾತಂತ್ರ್ಯ ಪೂರ್ವ ಕಾಲಘಟ್ಟದಲ್ಲಿ ಮಲೆನಾಡಿನ ತಪ್ಪಲಿನಲ್ಲಿ ನಡೆಯುವ ಕಥೆ ಇದು. ಗೋಪಾಲಯ್ಯ ಹಾಗೂ ಶಂಕ್ರಮ್ಮ ಎನ್ನುವ ದಂಪತಿಗಳು ಅತಿಥಿಗಳಿಗೆ ಕಟ್ಟುಬಿದ್ದ ನಾಲ್ಕು ದಿನ ಅಲ್ಲಿ ಉಳಿದುಕೊಂಡು ಆ ಕುಟುಂಬದ ಮಾತುಗಳನ್ನು ತಿಳಿದುಕೊಳ್ಳುತ್ತಾರೆ. ಮಗ ಇಂಗ್ಲೀಷ್ ವಿದ್ಯಾಭ್ಯಾಸ ಮುಗಿಸಿ ಪೇಟೆಗೆ ಹೋಗಿ ಮರಳಿ ಬಾರದೆ ಹೋಗುತ್ತಾನೆ. ಅವರ ದಾರಿಯನ್ನು ಕಾಣುವ ವೃದ್ಧ ದಂಪತಿಗಳ ನೋವು ಮುಗ್ಧತೆ ಹಾಗೂ ಶುದ್ಧ ಜೀವನ ಕಾದಂಬರಿಯಲ್ಲಿ ಸಹಜವಾಗಿ ಮೂಡಿ ಬಂದಿದೆ.

ಗೋಪಾಲಯ್ಯ ದಂಪತಿಗೆ ವೃದ್ಧಾಪ್ಯದಲ್ಲಿ ಮಗಳ ಅಗಲಿಕೆ ಮತ್ತು ಮಗ ಹಿಂದಿರುಗಿ ಬಾರದಿರುವ ಸಂಕಟಗಳಿದ್ದರೂ ಆ ಇಳಿ ವಯಸ್ಸಿನಲ್ಲೂ ಜೀವನೋತ್ಸಾಹ, ಅತಿಥಿಯನ್ನು ಆಧಾರಿಸುವ ಪರಿ, ಆಗಿನ ಕಾಲದ ಮಲೆನಾಡಿನ ಕೌಟಂಬಿಕ ವ್ಯವಸ್ಥೆ, ಮಲೆನಾಡಿನ ಕೃಷಿ ವ್ಯವಸ್ಥೆ, ಭೇಟೆ ಪದ್ಧತಿ ಎಲ್ಲವೂ ಕಾದಂಬರಿಯಲ್ಲಿ ಅತಿ ಸುಂದರವಾಗಿ ಚಿತ್ರಿತವಾಗಿದೆ.

ಗೋಪಾಲಯ್ಯ ಶಂಕ್ರಮ್ಮ ಶಿವರಾಮ ಮೊದಲಾಗಿ ನಾಮಾಂಕಿತರಾದ ಪ್ರಾದೇಶಿಕ ವ್ಯಕ್ತಿ ಚಿತ್ರಗಳು ಹುಲಿ, ಬೇಟೆ, ಪಂಜ, ಗಿಡ್ಡಿನ ಕಾಫಿ, ಮಜ್ಜಿಗೆ ಹುಳಿ, ಎಣ್ಣೆ ಸ್ನಾನ, ಕುಮಾರಪರ್ವತವೇ ಮೊದಲಾದ ಬೆಟ್ಟಗಳ ದೃಶ್ಯ ಚಿತ್ತಾರ, ಆ ಬೆಟ್ಟಗಳಿಂದ ಹಳ್ಳಿಗೆ ಹೊಲಗದ್ದೆಗಳಿಗೆ ನುಗ್ಗುವ ಆನೆ, ಕಾಟಿ, ಕ್ರೂರ, ಹುಲಿ ಕಾಡುಹಂದಿಗಳ ದಾಂದಲೆ ಇವೇ ಮೊದಲಾಗಿ ಸುತ್ತಲಿನ ಹಳ್ಳಿಗಳಿಗೆ ಜೀವನಾಡಿಯಾಗಿರುವ ನದಿ, ಕೆರೆಗಳ ಪರಿಚಯ ಹಳೆಯ ಕಾಲದ ಕಾಡಿನ ಜೀವನವನ್ನು ಕಣ್ಣಮುಂದೆ ಬಿತ್ತರಿಸುತ್ತದೆ. ಹಗಲಿರುಳು ದುಡಿಯುವ ಕೆಲಸದಾಳುಗಳು, ಅಡಿಕೆ ತೋಟಗಳು ಹೀಗೆ ಇಡೀ ಕಾದಂಬರಿ ಬೆಟ್ಟದಂತಹ ಪರಿಸರದಲ್ಲಿ ನಡೆಯುವುದಲ್ಲದೇ ಅಲ್ಲಿನ ಕಷ್ಟಕರ ಬದುಕು, ನಗರದಿಂದ ದೂರವೇ

ಉಳಿಯುವ ಆ ಭಾಗ್ಯ ಕಾಡುಮೃಗಳನ್ನು ಎದುರಿಸುವ ಸಮಸ್ಯೆಯ ಜೊತೆಗೆ ಹೊಂದಾಣಿಕೆ ನಡೆಸುವುದು ಇವೆಲ್ಲಾ ಒಂದು ಹೊಸ ಜಗತ್ತನ್ನು ಸೃಷ್ಟಿಸಿಕೊಂಡಂತೆ ಕಾಣುತ್ತದೆ.

ದನವನ್ನು ಹಿಡಿದು ತಿನ್ನುವ ಹುಲಿಯ ಪ್ರಸಂಗ ಕಣ್ಣು ಮುಂದೆ ಮೂಡಿಬರುತ್ತವೆ. ಕೊನೆಗೂ ಹುಲಿಯನ್ನು ಸಾಯಿಸುವಲ್ಲಿ ಯಶಸ್ವಿಯಾಗುವ ಗೋಪಾಲಯ್ಯನವರು ಮಗ ಶಂಭುವನ್ನು ಹುಡುಕಿಕೊಂಡು ಬರವಲ್ಲಿಯೂ ಯಶಸ್ಸು ಸಾಧಿಸುತ್ತಾರೆನ್ನುವ ಆಶಯದಂತೆ ಕಾದಂಬರಿ ಮುಕ್ತಾಯವನ್ನು ಪಡೆಯುತ್ತದೆ.

**ಗ್ರಾಮನಾಮಗಳ ಸಾಂಸ್ಕೃತಿಕ ಪರಿವೇಷ**

ಗ್ರಾಮೀಣರ ಮುಖ್ಯವಾದ ಉದ್ಯೋಗ ಒಕ್ಕಲುತನ. ಹಿಂದೆ ಪಾರಂಪರಿಕವಾಗಿ ಭೂಮಿ ರಾಜನಿಗೆ ಸೇರಿದ್ದಾಗಿತ್ತು, ಸಾಗುವಳಿ ಭೂಮಿಯನ್ನು ಕುಟುಂಬದ ಅವಶ್ಯಕತೆಗನುಗುಣವಾಗಿ ಹಂಚಲಾಗುತ್ತಿತ್ತು. ಸಾಮಾನ್ಯವಾಗಿ ಮನೆಗಳು ಹೊಲದ ಮಧ್ಯದಲ್ಲಿ ಇರುತ್ತಿದ್ದವು. ಗಡಿಯಲ್ಲಿ ಮಾವು, ಬೇವು, ತೆಂಗಿನಮರ, ಅರಳಿ ಇತ್ಯಾದಿ ಮರಗಳನ್ನು ನೆಡುವ ಪದ್ಧತಿ ಇತ್ತು.

ಉತ್ತು ಬಿತ್ತಿ ಬೆಳೆದುಕೊಳ್ಳುವ ಹೊಲಕ್ಕೆ ಸಮೀಪವಾಗಿ ಅನುಕೂಲಕ್ಕೆ ತಕ್ಕಂತೆ ವರ್ಷಂಪ್ರತಿ ನೀರಿನ ಸೌಕರ್ಯವುಳ್ಳ ಹಳ್ಳದ ದಂಡೆಯಲ್ಲಿರುವ ಭೂಮಿ ತುಂಬ ಪ್ರಯೋಜನಕಾರಿಯಾಗಿರುತ್ತಿತ್ತು. ಕೃಷಿಗೆ ಉತ್ತಮ ಹವಾಗುಣ ಮತ್ತು ನೀರಿನ ಆಸರೆ ಎಂದರೆ ನದಿ-ತಟ ಗಿರಿ ಗಹ್ವಾರಗಳ ಸನಿಹವೆ ಆಗಿತ್ತು. ಮಾನವನ ಆರಾಧ್ಯ ದೈವವಾದ ಪ್ರಕೃತಿಯಲ್ಲಿ ಗಿಡ, ಮರ, ಮಣ್ಣು, ಬಳ್ಳಿ, ಕಲ್ಲು ಬೆಟ್ಟ, ಗುಡ್ಡ, ಕಣಿವೆ, ಜಲ ಸಮುದ್ರ ಸರೋವರಗಳೆ ಪ್ರಮುಖವಾದವುಗಳಾಗಿವೆ.

ಜೀವನಕ್ಕೆ ಪೂರಕವಾಗಿ ಬಳಕೆಗೆ ಬಂದ ಕಬ್ಬಿಣದ ಆಯುಧಗಳಿಂದ ಕಾಡನ್ನು ಕಡಿದು ನೆಲವನ್ನು ಹದಮಾಡಿ ಹೆಚ್ಚು ಭೂಮಿಯನ್ನು ಕೃಷಿಗೆ ತರುವ ಕೆಲಸ ಸುಲಭವಾಗಿರಬೇಕು. ಚಾರಿತ್ರಿಕ ಕಾಲಘಟ್ಟದಲ್ಲಿ ಹೀಗೆ ಕೃಷಿಗೆ ಒಳಪಡಿಸಿದ ಭೂಮಿಗೆ ಕೆರೆ-ಕಟ್ಟೆ, ಕಾಲುವೆಗಳ ಮೂಲಕ ನೀರನ್ನು ಹಾಯಿಸುವ ಅಥವಾ ಪಡೆಯುವ ಸಾಹಸ ನಡೆದಿರಬಹುದು. ಎಲ್ಲಿ ನೀರು ಸಮೀಪವಾಗಿರುತ್ತದೆಯೋ

Scanned with OKEN Scanner

ಕೃಷಿಗೆ ಯೋಗ್ಯವಾದ ಕೆಲಸಗಳಾಗಿದ್ದವು. ಬಹುಪಾಲು ಕೃಷಿ ಭೂಮಿಗಳು ಮಳೆಯ ನೀರನ್ನು ಅವಲಂಬಿಸಿರುತ್ತವೆ. ಈ ಹಿನ್ನೆಲೆಯಲ್ಲಿ ಕೆರೆ ಕುಂಟೆಗಳ ನಿರ್ಮಾಣವಾದವು.

ಭೂಮಿಯ ವೈಲಕ್ಷಣ ಅವರದೇ ಸ್ವಂತವಾದ ತೋಟಗಾರಿಕೆ ಅವರ ಮನೆಯ ಹಿಂಭಾಗದಲ್ಲಿ ಹೂ, ತರಕಾರಿ, ಹಣ್ಣು ಹಂಪಲು ಗಿಡಗಳು ಜೀವನ ಪರ್ಯಂತ ಅನುಭವಿಸಲು ಆರ್ಥಿಕ ಸ್ಥಿರತೆ ಪಡೆಯಲು ತೆಂಗು, ಅಡಿಕೆ, ಯಾಲಕ್ಕಿ, ಕಾಫಿ, ಹಲಸು, ಮಾವು, ಕಿತ್ತಳೆ ತೋಟಗಳನ್ನು ನಿರ್ಮಿಸಿಕೊಂಡಿರುವ ವ್ಯವಸ್ಥೆಗಳು ಕಂಡು ಬರುತ್ತವೆ.

ಕೃಷಿ ಉತ್ಪಾದಕತೆಯಲ್ಲಿ ಏರಿಳಿತವನ್ನು ಕಾಣುತ್ತಿದ್ದೇವೆ. ಅದರಲ್ಲೂ ಅನಾವೃಷ್ಟಿ ಹಾಗೂ ಅತಿವೃಷ್ಟಿಯಿಂದ ಪ್ರತಿ ವರ್ಷ ರೈತರು ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಈ ಎಲ್ಲಾ ತೊಂದರೆ ಹಾಗೂ ಬದಲಾವಣೆಗಳನ್ನು ಎದುರಿಸಿ ಕೃಷಿಯಲ್ಲಿ ಯಶಸ್ಸು ಸಾಧಿಸಿ ಹೆಚ್ಚು ಲಾಭಗಳಿಸುತ್ತಾ ರೈತರು ಗಮನ ಹರಿಸುವುದು ಹಾಗೂ ಗ್ರಾಮೀಣ ಭಾಗಗಳಿಂದ ಸಣ್ಣ ಹಿಡುವಳಿದಾರರು ಕೃಷಿಯೇತರ ಉದ್ಯೋಗ ಅರಿಸಿ ನಗರಗಳಿಗೆ ಬರುವುದನ್ನು ನಿಯಂತ್ರಿಸುವುದು ಒಂದು ಸವಲಾಗಿದೆ.

ಇದಕ್ಕಾಗಿ ಬಹುತೇಕ ಮಳೆಯ ಅನಶ್ಚಿತತೆಯಿಂದಾಗಿ ಮಳೆ ನೀರು ಸಮರ್ಥ ಬಳಕೆ ಸೂಕ್ತ. ಬೆಳೆ ಪದ್ಧತಿ ಹಾಗೂ ಉತ್ಪಾದನಾ ತಾಂತ್ರಿಕತೆಗಳು ಕೃಷಿ ಹೆಚ್ಚಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಭಾರತೀಯ ಕೃಷಿ ಜ್ಞಾನ ಪರಂಪರೆಗೆ ಸುಮಾರು ಹತ್ತು ಸಾವಿರವರ್ಷಗಳ ಇತಿಹಾಸವಿದೆ. ಭಾರತ ಕೃಷಿ ಪ್ರಧಾನ ದೇಶ. ಶೇ 70 % ರಷ್ಟು ಜನ ಕೃಷಿಯನ್ನು ಅವಲಂಭಿಸಿದ್ದಾರೆ. ಸಹಸ್ರ ಕೃಷಿಕರ ಬೇಸಾಯದ ಜೀವನದ ಅನುಭವ ಮತ್ತು ಜ್ಞಾನಸಿರಿವಂತಿಕೆಯೇ ಕೃಷಿ.

"ರೈತನು ಉಳುವ ಯೋಗಿ" ಎಂದರು ಕನ್ನಡ ಮಹಾಕವಿ ಕುವೆಂಪು ಕೃಷಿ ಎಂಬುದು ಬರಿ ಕೃಷಿ ಕಸುಬಾಗಿರಲಿಲ್ಲ. ಅದು ರೈತನ ಬೆಳಗುವ ಜ್ಯೋತಿಯಾಗಿತ್ತು. ನಿಸರ್ಗದ ಮಡಿಲಲ್ಲಿ ಬೇಸಾಯ ಮಾಡುವ ರೈತನಿಗೆ ಕೃಷಿಯು

Scanned with OKEN Scanner

ಆಳದಲ್ಲಿ ಮೋಕ್ಷ ಅರೆಸುವ ಮಾರ್ಗವೂ ಆಗಿತ್ತು. ಬೇಸಾಯ ಜೀವನದ ಜೊತೆಗೆ ಅಧ್ಯಾತ್ಮವೂ ಬೆಸದು ಮಧ್ಯಯುಗ ಕಾಲದ ಗ್ರಾಮ ಭಾರತವು ಪ್ರಶಾಂತವಾಗಿ ಬಾಳಿದ್ದನ್ನು ಇಲ್ಲಿ ಸ್ಮರಿಸಬಹುದು.

*****

**ಆಕಾರ ಗ್ರಂಥಗಳು :**


1 ಹೊಸಗನ್ನಡ ಸಾಹಿತ್ಯ (ಸಾಸಾಚ): ಎಲ್.ಎಸ್. ಶೇಷಗಿರಿರಾವ್

2 ವಿಮರ್ಶ ವಿನಯ ಕಾದಂಬರಿ: ಕೀರ್ತಿನಾಥ ಕುರ್ತಕೋಟಿ

3 ವಿಮರ್ಶೆಯ ಪೂರ್ವ ಪಶ್ಚಿಮ: ಜಿ.ಎಸ್. ಶಿವರುದ್ರಪ್ಪ

4 ಐತಿಹಾಸಿಕ ಡಾ: ಎಂ.ಎಂ. ಕಲಬುರ್ಗಿ

5 ಸಾಹಿತ್ಯ ವಿಮರ್ಶೆ: ಸಂ.ಮಲ್ಲೇಪುರಂ ಜಿ. ವೆಂಕಟೇಶ

6 ಸಾಹಿತ್ಯ ವಿಮರ್ಶೆ: ಮತ್ತು ಹೊಸಾಹತೋತ್ತರ ಚಿಂತನೆ: ಡಾ. ಸಿ.ಎನ್. ರಾಮಚಂದ್ರನ್

7 ಸಾಹಿತ್ಯ ವಿಶ್ಲೇಷಣೆ: ಎಲ್.ಎನ್. ಶೇಷಗಿರಿರಾವ್

8 ಸಾಹಿತ್ಯ ಚಿಂತನ: ಚನ್ನವೀರ ಕಣವಿ

9 ಕಾದಂಬರಿ ವಸ್ತು ಮತ್ತು ತಂತ್ರ: ಗಿರಡ್ಡಿ ಗೋವಿಂದರಾಜು

10 ಸಂವಾದ: ಹಾ.ಮಾ ನಾಯಕ



Scanned with OKEN Scanner

ರಿಸರ್ಚ ಎಂಬ ಇಂಗ್ಲೀಷ ಶಬ್ದಕ್ಕೆ ಕನ್ನಡದಲ್ಲಿ ಸಂಶೋಧನೆ ಎಂದು ಹೇಳಬಹುದು. ಸಂಶೋಧನೆ ಎಂಬ ಪ್ರಕ್ರಿಯೆ ಸೃಜನೇತರ ಸಾಹಿತ್ಯ ಎಂಬ ವಿಭಾಗಕ್ಕೆ ಸೇರಿಸಿದ್ದಾರೆ. ಹೀಗಾಗಿ ಇದು ಬಹಳಷ್ಟು ಜನರಿಗೆ ಆಕರ್ಷಕವಾಗಿಲ್ಲ. ಗತದ ಆಧಾರದ ಮೇಲೆ ವರ್ತಮಾನ ಸಮಾಜ ಕಟ್ಟಬೇಕಾಗಿದೆ. ಅಂದರೆ ಸಂಶೋಧನೆ ಸೃಜನವಾಗಬೇಕಿದೆ. ಎಂ. ಎಂ. ಕಲಬುರ್ಗಿಯವರು ಹೇಳುವಂತೆ, ಸಂಶೋಧಕ ಆಕಸ್ಮಿಕ ತಪ್ಪು ಹೇಳಿರಬಹುದು, ಸುಳ್ಳು ಹೇಳಲಾರ.

ಈ ಸಂಕಲನದಲ್ಲಿ ವೈವಿಧ್ಯ ಪ್ರಬಂಧಗಳ ಗುಚ್ಛ ಇದೆ. ವಚನ, ಕಾದಂಬರಿ, ನಾಟಕ, ದಲಿತ, ತತ್ವಪದ, ಬಯಲಾಟ, ಜನಪದ ಮತ್ತು ಸಮುದಾಯಕ್ಕೆ ಸಂಬಂಧಿಸಿದ ವಿಶ್ಲೇಷಣೆ ಇದೆ. ಸಂಶೋಧನಾ ಕ್ಷೇತ್ರದಲ್ಲಿ ಕಾಲಿಡುವ ವಿದ್ಯಾರ್ಥಿಗಳಿಂದ ಪ್ರಾರಂಭವಾಗಿ ಈ ಕ್ಷೇತ್ರದಲ್ಲಿ ಪಳಗಿರುವ ಪ್ರಬಂಧಗಳನ್ನು ಈ ಸಂಕಲನ ಒಳಗೊಂಡಿದೆ.

ಸಂಶೋಧನೆ ಎಂದರೆ ಏನು ಎಂಬ ವಿಷಯದ ಬಗ್ಗೆ ಪ್ರಾರಂಭದಲ್ಲಿ ಒಂದು ಲೇಖನ ಇದ್ದರೆ ಈ ಪುಸ್ತಕದ ಮೌಲ್ಯ ಇನ್ನೂ ಹೆಚ್ಚುತ್ತಿತ್ತು ಎನಿಸುತ್ತದೆ. ಕೇವಲ ಸಂಶೋಧನಾ ವಿದ್ಯಾರ್ಥಿಗಳಲ್ಲದೆ ಸಾಮಾನ್ಯ ಓದುಗರ ಜ್ಞಾನ ಪರೀಧಿಯನ್ನು ಈ ಗ್ರಂಥದ ಓದು ವಿಸ್ತರಿಸುತ್ತದೆ. ನನ್ನಂತಹ ಅನಾಮಿಕನಿಂದ ಚೆನ್ನುಡಿ ಬಯಸಿದ ಸಂಪಾದಕರ ಮನೋನಿರ್ಧಾಕ್ಕೆ ನಾನು ಋಣಿಯಾಗಿದ್ದೇನೆ.

ಪ್ರೊ. ಮಹೇಶ ತಿಪ್ಪಶೆಟ್ಟಿ
ಸಾಹಿತಿಗಳು, ಹುನಗುಂದ



ರೂ. ೮೦/-

9788194812845